
ಎನ್. ಜಗನ್ನಾಥ ಪ್ರಕಾಶ್

# ಜನಪ್ರಿಯ ಸ್ತ್ರೀ ಪಾತ್ರಧಾರಿ ಡಿ. ಮುರಾರಾಚಾರ್



ಪೌರಾಣಿಕ, ಚಾರಿತ್ರಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಸ್ತ್ರೀ ಪಾತ್ರಗಳಿಗೆ ಜೀವತುಂಬಿ ಜನಪ್ರಿಯತೆ ಗಳಿಸಿದ ದೊಡ್ಡಬಳ್ಳಾಪುರದ ಡಿ. ಮುರಾರಾಚಾರ್ ಸುಶ್ರಾವ್ಯ ರಂಗ ಗೀತೆಗಳಿಂದಲೂ ಖ್ಯಾತಿ ಪಡೆದ ರಂಗ ನಟ.

ವಂಶಪಾರಂಪರ್ಯವಾಗಿ ಬಂದಿದ್ದ ಕಸುಬು ನೋಡಿಕೊಳ್ಳಲು ಒಂದಷ್ಟು ಓದು ಬೇಕೆಂಬ ಮನೆಯವರ ಒತ್ತಾಯಕ್ಕೆ ಶಾಲೆ ಸೇರಿದ ಮುರಾರಾಚಾರ್ ಅವರಿಗೆ ಎಳೆಯ ವಯಸ್ಸಿನಿಂದಲೇ ಅಂಟಿಕೊಂಡಿದ್ದು ಅಭಿನಯ ಕಲೆ. ಹಾರ್ಮೋನಿಯಂ ಶಿಕ್ಷಕ ನಾಗಪ್ಪನವರ ಗರಡಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ತಂದೆಯ ಆಕಸ್ಮಿಕ ಅಗಲಿಕೆಯಿಂದ ಅವರ ಕಲೆಗೆ ಪ್ರೋತ್ಸಾಹ ಸಿಗಲಿಲ್ಲ.

ಗೌರಿ ಹಬ್ಬ ದೊಡ್ಡಬಳ್ಳಾಪುರದಲ್ಲಿ ಅದ್ದೂರಿ ಕಾರ್ಯಕ್ರಮ. ಅಂದು ಹಲವು ಹತ್ತು ವೇಷಧಾರಿಗಳು ಹಾದಿಯಲ್ಲಿ ಸಾಗುತ್ತ ಊರವರ ರಂಜಿಸುವುದು ರೂಢಿ. ಇಂತಹ ಮೆರವಣಿಗೆ ನೋಡುತ್ತಿದ್ದ ಕಲಾರಸಿಕರೂ, ಸಿರಿವಂತರೂ ಆಗಿದ್ದ ಅಮಾವಾಸ್ಯೆ ನಂಜುಂಡಯ್ಯನವರಿಗೆ ಆಲೋಚನೆಯೊಂದು ಬಂತು. ಅದು ಊರ ಹುಡುಗರನ್ನು ಸೇರಿಸಿ ನಾಟಕ ಆಡಿಸುವುದು. 'ಕಾಳಿದಾಸ' ನಾಟಕ ಕಾರ್ಯರೂಪಕ್ಕೆ ಬರಲು ಹೆಚ್ಚು ಸಮಯ ಬೇಕಾಗಲಿಲ್ಲ.

ಘಾಟಿಸುಬ್ರಹ್ಮಣ್ಯ ದೊಡ್ಡ ಧಾರ್ಮಿಕ ಕ್ಷೇತ್ರ. ಇಲ್ಲಿ ಜರುಗುವ ಜಾತ್ರೆಯಂತೂ ತುಂಬಾ ಪ್ರಸಿದ್ಧಿ. ಜಾತ್ರೆಗಳಲ್ಲಿ ನಾಟಕ ಕಂಪೆನಿಗಳು ಮೊಕ್ಕಾಂ ಹಾಕುವುದು ಸಾಮಾನ್ಯ. ದೊಡ್ಡಬಳ್ಳಾಪುರದ ಹವ್ಯಾಸಿ ಯುವಕರ 'ಕಾಳಿದಾಸ' ನಾಟಕವೂ ಇಲ್ಲಿ ಏರ್ಪಾಡಾಯಿತು. ಅಲ್ಲಿ ಗುಬ್ಬಿ ಕಂಪೆನಿ ಮಾಲೀಕ ಜಿ.ಎಚ್. ವೀರಣ್ಣನವರೇ 'ಕಾಳಿದಾಸ' ನಾಟಕಕ್ಕೆ ಮುಖ್ಯ ಅತಿಥಿಯಾಗಿದ್ದರು. ಕಾಳಿದಾಸ ನಾಟಕದ ಮುಖ್ಯಪಾತ್ರ ವೇಶ್ಯೆ ರತ್ನಾಳದ್ದು. ಅದನ್ನು ಅಭಿನಯಿಸಿದವರು ಮುರಾರಾಚಾರ್. ಇವರ ಅಭಿನಯವನ್ನು ಸೂಕ್ಷ್ಮವಾಗಿ ಕಂಡ ವೀರಣ್ಣನವರು ಮರುದಿನವೇ ಇವರನ್ನು ತಮ್ಮ ಕಂಪೆನಿಗೆ ನೇಮಿಸಿಕೊಂಡರು.

ಗುಬ್ಬಿ ಕಂಪೆನಿಯಲ್ಲಿದ್ದ ಪ್ರಸಿದ್ಧ ನಟ–ನಟಿಯರ ಜೊತೆಗೆ ಸಣ್ಣ ಪುಟ್ಟ ಪಾತ್ರಗಳನ್ನು